ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C.230/2017 P.W. 1

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ** ಃ–

ನಾನು MSc., Bed ಮಾಡಿದ್ದೇನೆ.ವ಼ುದುವೆ ಪೂರ್ವದಲ್ಲಿ ಬಾಗೇಪಲ್ಲಿ ಯಲ್ಲಿ ಪ್ರಗತಿ ಇಂಗ್ಲೀಷ್ ಶಾಲೆಯಲ್ಲಿ ಸಹಾಯಕಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ. ನನ್ನ ತಂದೆ ರಿಯಲ್ ಎಸ್ಟೆಟ್ ಬಿಸ್ನೆಸ್ ಮಾಡುತ್ತಾರೆ. ನನ್ನ ತಂದೆ ತಾಯಿಗೆ ನಾವು 3 ಜನ ಮಕ್ಕಳು. ಇಬ್ಬರು ಅಪಘಾತದಲ್ಲಿ 2003 ಅಥವಾ 2005 ರಲ್ಲಿ ತೀರಿಕೊಂಡಿದ್ದಾರೆ. ಅಪಘಾತದ ಪರಿಹಾರದ ಹಣ ಎಷ್ಟು ಬಂದಿದೆ ನನಗೆ ಗೊತ್ತಿಲ್ಲ. ನನ್ನ ತಂದೆ ಆದಾಯ ಪಾವತಿದಾರನಲ್ಲ.

**2.** ಮದುವೆ ಪೂರ್ವದ ಮಾತುಕತೆಯಲ್ಲಿ ನಾನು ಇದ್ದೆ. ಮದುವೆಗಿಂತ 8 ತಿಂಗಳ ಮೊದಲು ಮಾತುಕತೆ ನಡೆದಿರುತ್ತದೆ. ಹಲವಾರು ಬಾರಿ ಮಾತುಕತೆ ನಡೆದಿರುತ್ತದೆ. ಮಾತುಕತೆಯಲ್ಲಿ ನನ್ನ ತಂದೆ ತಾಯಿ ಇದ್ದರು. ಆರೋಪಿ ಕಡೆಯಿಂದ ಅವರ ತಂದೆ ತಾಯಿ ಅವರ ಸಹೋದರಿ ಇದ್ದರು. ನಮ್ಮ ಮನೆಯಲ್ಲಿ ಎಷ್ಟು ಬಾರಿ ಮತ್ತು ಆರೋಪಿ ಮನೆಯಲ್ಲಿ ಎಷ್ಟು ಬಾರಿ ಮಾತುಕತೆ ನಡೆದಿದೆ ನೆನಪಿಲ್ಲ.

**3.** ಆರೋಪಿಗೆ ಯಾವ ದಿನಾಂಕದಂದು 10 ಲಕ್ಷ ರೂ.ನಗದಾಗಿ ನೀಡಿದ್ದೇವೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಆರೋಪಿಯ ಮನೆಗೆ ಹೋಗಿ ಹಣ ನೀಡಿರುತ್ತೇವೆ, ಹಣ ನೀಡುವಾಗ ನಾನು ಇರಲಿಲ್ಲ. ಸದರಿ 10 ಲಕ್ಷ ರೂ. ಹಣವನ್ನು ನನ್ನ ಪೋಷಕರಿಗೆ ನಾನೇ ತೆಗೆದು ಕೊಟ್ಟಿದ್ದೇನೆ. ಹಣವನ್ನು ನಾನು ನೊಡಿದ್ದೇನೆ. ಹಣ ಯಾವ ಮುಖ ಬೆಲೆಯ ನೋಟುಗಳು ನೆನಪಿಲ್ಲ. ಸಾಕ್ಷಿ ಮುಂದುವರೆದು 500/- ರೂ ಮುಖ ಬೆಲೆಯ ನೋಟುಗಳು ಇರಬಹುದು. 10 ಲಕ್ಷ ಹಣವನ್ನು ನನ್ನ ತಂದೆ ತಾಯಿ ಜೊತೆಗೆ ನನ್ನ ಸೋದರ ಮಾವ ಮುಸ್ತಾಫ ಬೆಗ್ ರವರು ತೆಗೆದುಕೊಂಡು ಹೋಗಿರುತ್ತಾರೆ.

**4.** ಮದುವೆಗಿಂತ ಮೊದಲು 5 ತಿಂಗಳ ಹಿಂದೆ 10 ಲಕ್ಷ ಹಣವನ್ನು ನೀಡಿದ್ದೇವೆ. ಈ ವಿಷಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ. ಬಂಗಾರದ ಒಡವೆಯನ್ನು ಖರೀದಿಸಿದಾಗ ಅಂಗಡಿಯವರು ರಶೀದಿಯನ್ನು ನೀಡುತ್ತಾರೆ ಎಂದರೆ ಸರಿ. ಒಡವೆಗೆ ಸಂಬಂಧಿಸಿದ ರಶೀದಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಅವುಗಳು ನನ್ನ ಅತ್ತೇಯ ಬಳಿ ಇದೆ. ಈ ವಿಚಾರವನ್ನು ಪೋಲೀಸರಿಗೆ ಮತ್ತು ನನ್ನ ಮುಖ್ಯ ವಿಚಾರಣೆ ಸಮಯದಲ್ಲಿ ಹೇಳಿಲ್ಲ.

**5.** ಬಂಗಾರ ಖರೀದಿಸಲು ಜೊತೆಗೆ ನಾನು ಹೋಗಿರುತ್ತೇನೆ. ಮದುವೆಗಿಂತ 4 ತಿಂಗಳ ಮುಂಚೆ ಬಂಗಾರದ ಒಡವೆಗಳನ್ನು ಖರೀದಿಸಲಾಯಿತು. ಬಾಗೇಪಲ್ಲಿಯ ಬಂಗಾರದ ಅಂಗಡಿಯಲ್ಲಿ ಒಡವೆಯನ್ನು ಖರೀದಿಸಿರುತ್ತೇವೆ. ಅಂಗಡಿಯ ಹೆಸರು ಗೊತ್ತಿಲ್ಲ. ಎಷ್ಟು ಬಾರಿ ಒಡವೆಗಳನ್ನು ಖರೀದಿ ಮಾಡಿದ್ದೇವೆ ನೆನಪಿಲ್ಲ. ಒಂದಕ್ಕಿಂತ ಜಾಸ್ತಿ ಬಾರಿ ಒಡವೆಗಳನ್ನು ಖರೀಸಿದ್ದೇವೆ ಎಂದರೆ ಸರಿ. ಎಷ್ಟು ಬಾರಿ ನಾನು ಬಂಗಾರ ಖರೀದಿಸಲು ಹೋಗಿದ್ದೇನೆ ನೆನಪಿಲ್ಲ. ಒಡವೆ ಅಥವಾ ಯಾವುದೇ ವಸ್ತು ಖರೀದಿಸುವಾಗ ಅಂಗಡಿ ಹೆಸರನ್ನು ಸಾಮಾನ್ಯವಾಗಿ ನೋಡುತ್ತೇವೆ ಎಂದರೆ ಸರಿ. ಬಂಗಾರದ ಅಂಗಡಿ ಹೆಸರು ನಾಮ ಅಶ್ವಥಯ್ಯ ರವರ ಅಂಗಡಿ ಎದುರಿಗೆ ಬಂಗಾರದ ಅಂಗಡಿ ಗುಪ್ತ ಜ್ಯೂವಲರಿ ಇರುತ್ತದೆ.

**6.** ಒಡವೆ ಖರೀದಿಸಿದ ದಿನಾಂಕ ಮತ್ತು ಅಂಗಡಿ ಹೆಸರನ್ನು ಪೊಲೀಸರಿಗೆ ಹೇಳಿಲ್ಲ. ಹೇಳಲು ತೊಂದರೆ ಇರಲಿಲ್ಲ ಎಂದರೆ ಸರಿ. ಮಾತುಕತೆಗೆ ಬರುತ್ತಿದ್ದಾಗ ಒಡವೆಗಳನ್ನು ಒಂದೊಂದು ಬಾರಿ ಬಂದಾಗ ಒಡವೆಗಳನ್ನು 1 ನೇ ಆರೋಪಿಗೆ ನೀಡಿರುತ್ತೇವೆ. ನನ್ನ ಅತ್ತೆಗೂ ಒಡವೆಗಳನ್ನು ನೀಡಿರುತ್ತೇವೆ. ಯಾವ ದಿನಾಂಕದಂದು ಒಡವೆಗಳನ್ನು ನೀಡಿದ್ದೇವೆ ನೆನಪಿಲ್ಲ. ಗೃಹ ಬಳಕೆಯ ವಸ್ತುಗಳಾದ ಫ್ರಿಜ್, ವಾಷಿಂಗ್ ಮಷಿನ್, ಗ್ರೆಂಡರ್, ಸೊಪಾ ಸೆಟ್, ಹೋಲಿಗೆ ಯಂತ್ರ ಮತ್ತು ಇತರೆ ವಸ್ತುಗಳನ್ನು

ನೀಡಿರುತ್ತೇವೆ. ಈ ಸಂಬಂಧ ಬಿಲ್ ಗಳು ನಮ್ಮ ಅತ್ತೆ ಬಳಿ ಇದೆ.

**7.** ಸ್ವಲ್ಪ ಗೃಹಪಯೋಗಿ ವಸ್ತುಗಳು ಮದುವೆಗಿಂತ 15 ದಿನಗಳ ಮುಂಚೆ ಖರೀದಿಸಲಾಗಿರುತ್ತದೆ. ಫ್ರಿಜ್ ಮತ್ತು ವಾಷಿಂಗ್ ಮಷಿನ್ ಮದುವೆ ನಂತರ ಖರೀದಿಸಲಾಗಿರುತ್ತದೆ. ನಾವು ಯಾವುದೇ ಒಡವೆಗಳನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. 15 ಲಕ್ಷ ಗೃಹ ಬಳಕೆ ವಸ್ತುಗಳನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಇಂಡಿಕಾ ಕಾರ್ ಖರೀದಿಸಿದಾಗ ಅದು ನನ್ನ ತಂದೆಯ ಹೆಸರಿಗೆ ಇತ್ತು. ಸದರಿ ಕಾರನ್ನು ಆರೋಪಿಗಳು ಉಪಯೋಗಿಸಿಕೊಂಡು ನನ್ನ ತಂದೆಗೆ ಬೇರೆಯವರು ಮುಖಾಂತರ ವಾಪಸ್ಸು ತಂದು ಕೊಟ್ಟು ಈಗ ಅದನ್ನು ನನ್ನ ತಂದೆ ಮಾರಾಟ ಮಾಡಿರುತ್ತಾರೆ. ಯಾವಾಗ ಮಾರಾಟ ಮಾಡಿದ್ದಾರೆ ಗೊತ್ತಿಲ್ಲ. ಯಾರ ಮುಖಾಂತರ ಕಾರನ್ನು ಕಳುಹಿಸಿರುತ್ತಾರೆ ಗೊತ್ತಿಲ್ಲ. ಕಾರ್ ಮಾರಾಟ ಮಡಿ ಎಷ್ಟು ದಿನಗಳು ಆಗಿದೆ ಗೊತ್ತಿಲ್ಲ, ಕಾರ್ ಮಾರಾಟ ಮಾಡಿರುವ ವಿಷಯ ನನಗೆ ಯಾವಾಗ ಗೊತ್ತಾಯಿತು ನೆನಪಿಲ್ಲ.

**8.** ಮನೆಗೆ ಬೇಕಾಗುವಷ್ಟು ನನ್ನ ತಂದೆ ಸಂಪಾದಿಸುತ್ತಾರೆ. ಮದುವೆ ಸಮಯದಲ್ಲಿ ನಮ್ಮಮನೆಯವರು ಬಂಗಾರದ ಮಾಂಗಲ್ಯ ಸರ, ಕಾಲಿಗೆ ಬೆಳ್ಳಿ ಚೈನ್, 5 ಸೀರೆಗಳನ್ನು ನೀಡಿದ್ದಾರೆ. 150 ಗ್ರಾಂ ನ ಬಂಗಾರದ ಹಾರವನ್ನು ಆರೋಪಿಗಳು ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಬಂಗಾರದ ಬಳೆಗಳನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. 5 ಗ್ರಾಂನ ಬಂಗಾರದ ಉಂಗುರ ನೀಡಿದ್ದಾರೆ ಎಂದರೆ ಸರಿಯಲ್ಲ. ಮದುವೆ ಆಗಿ 6 ತಿಂಗಳ ವರೆಗೆ ನಾವು ಚೆನ್ನಾಗಿ ಇದ್ದೇವು. ನನಗೆ ಇಬ್ಬರೂ ಗಂಡು ಮಕ್ಕಳು, ಅದರಲ್ಲಿ ಒಂದು ಮಗು ತೀರಿಹೋಗಿರುತ್ತದೆ. ನಾನು ಕಪ್ಪಾಗಿ ಇದ್ದೇನೆ ಎಂದು ನನ್ನನ್ನು ಹೀಯಾಳಿಸುತ್ತಿದ್ದರು.

**9.** ಈ ಪ್ರಕರಣ ದಾಖಲಿಸುವ ಮೊದಲು ಆರೋಪಿಯ ವಿರುದ್ಧ ನಾನು ಬೇರೆ ದೂರು ನೀಡಿಲ್ಲ. ನಾವು ಮತ್ತು ಆರೋಪಿಗಳು ಸಂಬಂಧಿಕರು ಎಂದರೆ ಸರಿ. ನಾನು

ಇರುವ ರೀತಿಯ ಬಗ್ಗೆ ಆರೋಪಿಗಳಿಗೆ ಮೊದಲೇ ತಿಳಿದಿತ್ತು ಎಂದರೆ ಸರಿ. ನಾನು ಕಷ್ಟಗೆ ಇರುವ ಕಾರಣ ಆರೋಪಿಗಳು ನನ್ನನ್ನು ಹಿಯಾಳಿಸುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ಎಕರೆ ಜಮೀನು 2 ಲಕ್ಷ ಹಣವನ್ನು ನನ್ನ ಅತ್ತೆ ಮತ್ತು ನಾದಿನಿಯರು ಕೇಳಿರುತ್ತಾರೆ ನಂತರ ನನ್ನ ಗಂಡನು ಕೂಡ ಕೇಳಿರುತ್ತಾರೆ. ಯಾವಗಿನಿಂದ ಕೇಳಲು ಪ್ರಾರಂಭಿಸಿರುತ್ತಾರೆ ದಿನಾಂಕ ನೆನಪಿಲ್ಲ.

10. ಮದುವೆ ಆದ ನಂತರ ನಾನು ಸಾಮಾನ್ಯವಾಗಿ ನನ್ನ ತಂದೆಯ ಮನೆಗೆ ಬಂದು ಹೊಗುತ್ತಿದ್ದೆ ಎಂದರೆ ಸರಿ. ತಿಂಗಳಿಗೆ ಎಷ್ಟು ಬಾರಿ ಬರುತ್ತಿದ್ದೆ ಎಂದರೆ ಯಾವಾಗಲಾದರೂ ಅವಶ್ಯಕತೆ ಇದ್ದರ ಬರುತ್ತಿದ್ದೆ. ತಿಂಗಳಿಗೆ 2-3 ಬಾರಿ ನನ್ನನ್ನು ಆರೋಪಿಯು ನನ್ನ ತಂದೆ ತಾಯಿಯ ಮನೆಗೆ ಬಿಟ್ಟು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ನಾನು ಒಬ್ಬಳೇ ಮಗುಳು ಇರುವುದರಿಂದ, ನನ್ನ ತಂದೆ ಆರೋಪಿಗೆ ಬಾಗೇಪಲ್ಲಿಯಲ್ಲಿ ನನ್ನ ಜೊತೆಗೆ ಇರಲು ಹೇಳಿದ್ದುದರಿಂದ ಭಿನ್ನಾಭಿಪ್ರಾಯ ಪ್ರಾರಂಭವಾಗಿರುತ್ತದೆ ಎಂದರೆ ಸರಿಯಲ್ಲ. ದಾಖಲೆಗೆ ಸಹಿ ಮಾಡುವ ಮೊದಲು ನಾನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ.

11. ಸಾಂತ್ವನ ಕೇಂದ್ರಕ್ಕೆ ಚಿಂತಮಣಿಯಲ್ಲಿ ನನ್ನ ಅತ್ತೇ ಮೊದಲು ಹೋಗಿರುತ್ತಾರೆ. ನನ್ನ ಮಗ ಮತ್ತು ಸೊಸೆಯನ್ನು ಪ್ರತ್ಯೇಕಿಸಿ ಎಂದು ನನ್ನ ಅತ್ತೆ ಅರ್ಜಿ ನೀಡಿರುತ್ತಾರೆ. ಹಲವಾರು ಬಾರಿ ಚಿಂತಮಣಿ ಸಾಂತ್ವಾನ ಕೇಂದ್ರದಲ್ಲಿ ಮಾತುಕತೆ ನಡೆದಿರುತ್ತದೆ ಎಂದರೆ ಸರಿ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮು. ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ